ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ, ೨೫ನೇ ಮಾರ್ಚ್ ೧೯೮೫, ಚೈತ್ರ ೪, ೧೯೦೭ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇತಗೊಂಡಿತು.

ಅಧ್ಯಕ್ಷರು—(ಶ್ರೀ ಬಿ. ಜಿ. ಒಣಕಾರ್) ಪೀಠವನ್ನಲಂಕರಿಸಿದರು. ಸಭೆಯು ಮುಂದಿಡಲಾಗುವ ಕಾಗದ ಪತ್ರಗಳು

ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯಲ್ಲಿ ಮುಂಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿ).—
೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ ೧೯(೨)ನೇ ಕಲಮಿನ ಮೇರೆಗೆ,

(೧) ೧೯೮೪-೮೫ನೇ ಸಾಲಿನ ಹಾಸನ ತಾಲ್ಲೂಕಿನ ೨೯೭ ಹಳ್ಳಿಗಳಿಗೆ ೧,೧೬,೦೦೦-೬೨ ರೂಗ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೫ನೇ ಮಾರ್ಚ್ ೧೪ನೇ ದಿನಾಂಕದಂದು ಹೊರಡಿಸಿದ ಆರ್ ಡಿ ೮೯ ಟಿ.ಆರ್. ಎಂ ೮೪ನೇ ಕ್ರಮಾಂಕದ ಅಧಿಸೂಚನೆ, ಹಾಗೂ

(೨) ೧೯೮೨-೮೩ನೇ ಸಾಲಿನ ಆಲೂರು ತಾಲ್ಲೂಕಿನ ೧೩೦ ಹಳ್ಳಿಗಳಿಗೆ ೬೩,೧೯೬-೩೦ ರೂಗಳ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೫ನೇ ಮಾರ್ಚ್ ೧೪ನೇ ದಿನಾಂಕದಂದು ಹೊರಡಿಸಲಾದ ಆರ್ ಡಿ ೯೫ ಟಿ ಆರ್ ಎಂ ೮೪ನೇ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯು ಮುಂದಿಡುವುದು.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು) —ವಾರ್ತಾ ಕ್ರೀಡೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರಗಳ (ನಿಬಂದನೆಗಳು)ಶಾಸನದ ೨೦ನೇ ಕಲಮಿನ ಮೇರೆಗೆ ಜೋಗ ಜಲಪಾತದಲ್ಲಿರುವ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮುಖ್ಯ ಅಭಿಯಂತರ(ವಿದ್ಯುಚ್ಛಕ್ತಿ) ಅವರು ಪ್ರದರ್ಶಿಸಿದ ೨೫ ಎಂ.ಎಂ. ನ ಚಲನಚಿತ್ರ ಪ್ರದರ್ಶನಕ್ಕೆ ವಿನಾಯಿತಿ ನೀಡುವ ಸಂಬಂದದಲ್ಲಿ ೧೯೮೫ ನೇ ಮಾರ್ಚ್, ೧೯ನೇ ದಿನಾಂಕದಂದು ಹೊರಡಿಸಿದ ಪೆಟ್ : ಡಿ. ೯೮ ಸಿ ಎನ್ ಎ ೮೫ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮುಂಡಿಸಲಾಯಿತು. ಗಮನಸೆಳೆಯುವ ಸೂಚನೆಗಳು.

ಶ್ರೀ ಆರ್. ವೆಂಕಟರಾವಮ್ಮ ಮುಳಬಾಗಿಲು ತಾಲ್ಲೂಕಿನಲ್ಲಿ ರೈತರು ಬಾವಿ ನೀರನ್ನೆ ಪೂರ್ಣವಾಗಿ ಅವಲಂಬಿಸಿದಾಗ್ಯೂ ಒತ್ತಾಯ ಪೂರ್ವಕವಾಗಿ ವಸೂಲಿ ಮಾಡಲಾಗುತ್ತಿರುವ ನೀರ ಸೆಕಂದಾಯವನ್ನು ಕೂಡಲೇ ನಿಲ್ಲಿಸಬೇಕೆಂಬ ವಿಚಾರವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಶ್ರೀ ಆರ್. ವೆಂಕಟರಾಮಯ್ಯ ಎಂ. ಎಲ್. ಎ. ಇವರು ಮುಳಬಾಗಲು ತಾಲ್ಲೂಕಿನಲ್ಲಿ ರೈತರು ತಮ್ಮ ಬಾವಿಯ ನೀರಿನಿಂದ ಬೆಳೆದ ಬೆಳೆಗಳಿಗೆ ಖುಷ್ಕಿ ಕಂದಾಯ ಬದಲಾಗಿ ತರೀ ಕಂದಾಯ ವಸೂಲು ಮಾಡುವುದನ್ನು ತಕ್ಷಣ ನಿಲ್ಲಿಸಬೇಕೆಂದು ಗಮನ ಸೆಳೆಯುವಸೂಚನೆ ಕೊಟ್ಟಿರುತ್ತಾರೆ.